## ನಕ್ಕುಬಿಡಿ



ರೋಗಿ: ಡಾಕ್ಟರೇ! ದಿನಾಲು ನನ್ನ ಕನಸಲ್ಲಿ ಹಾವು ಕಾಣಿಸಿಕೊಳ್ಳುತ್ತದೆ. ಭಯವಾಗುತ್ತದೆ.
ಡಾಕ್ಟರ್: ಈ ಔಷಧವನ್ನು ತಗೊಳ್ಳಿ; ಕನಸಲ್ಲಿ ಹಾವು ಬರುವಾಗಲೆಲ್ಲಾ ಜತೆಯಲ್ಲಿ ಹಾವಾಡಿಗನೂ ಬರುತ್ತಾನೆ. ಚಿಂತೆ ಬೇಡ.

★★★

ರೋಗಿ: ಡಾಕ್ಟರೇ! ನನ್ನ ಕಿವಿಯೊಳಗೆ ಸೆಲ್‌ಫೋನ್ ರಿಂಗ್ ಟೋನ್ ಕೇಳುತ್ತದೆ.
ಡಾಕ್ಟರ್: (ತಪಾಸಣೆಯ ಬಳಿಕ) ಈಗ ಏನೂ ಕೇಳುತ್ತಿಲ್ಲ ಅಲ್ವೆ?
ರೋಗಿ: ಈಗ ಸೆಲ್‌ಫೋನ್ ಸೈಲೆಂಟ್ ಮೋಡ್‌ನಲ್ಲಿರಬೇಕು, ಸರಿಯಾಗಿ ನೋಡಿ ಡಾಕ್ಟರ್!

★★★

ಅತಿಥಿ: ಬಾಗಿಲವರೆಗೆ ಬಂದು ಬೀಳ್ಕೊಡುತ್ತಿದ್ದೀರಿ ಸಂತೋಷ.
ಮನೆ ಮಾಲೀಕ: ಹಾಗೇನಿಲ್ರೀ... ನಿನ್ನೆ ತಾನೆ ಹೊಸ ಚಪ್ಪಲಿ ಖರೀದಿಸಿದೆ. ಈಗಿನ ಕಾಲದಲ್ಲಿ ಯಾರನ್ನೂ ನಂಬುವಂತಿಲ್ಲ.

★★★

ವರದಿಗಾರ: ನಿಮ್ಮ ಮದುವೆಯ ನಂತರ ಅಭಿನಯಿಸುವಿರಾ ಮೇಡಂ?
ನಟಿ: ಖಂಡಿತಾ. ಮದುವೆಯ ನಂತರ 'ಒಳ್ಳೆಯ ಹೆಂಡತಿಯಾಗಿ' ಅಭಿನಯಿಸಲೇ ಬೇಕಲ್ವೆ?

★★★

ಶಂಕರ್: ಪಕ್ಷದ ಹೆಸರಿನಲ್ಲಿ 'ವಿಮೆ' ತೆಗೆಯೋಕ್ಕಾಗುತ್ತದಾ ಅಂತ ನಮ್ಮ ನಾಯಕರು ವಿಚಾರಿಸುತ್ತಿದ್ದಾರಲ್ಲ, ಯಾಕೆ?
ರಾಜೇಶ್: 'ಪಾಲಿಸಿ' ಇಲ್ಲದ 'ಪಕ್ಷ' ಎಂದು ನಮ್ಮ ಪಾರ್ಟಿಯನ್ನು ಯಾರೋ ಗೇಲಿ ಮಾಡಿದ್ದಾರಂತೆ.

(ಸಂಗ್ರಹ) ಡಾ.ವಿ.ಪುಗಳೇಂದಿ, ಬಳ್ಳಾರಿ

---

ಒಬ್ಬ ಯುವಕನು ಸಾಕಷ್ಟು ಸಮಯ ತನ್ನ ಗರ್ಲ್‌ಫ್ರೆಂಡ್‌ಳೊಂದಿಗೆ ಕಳೆದ ನಂತರ ಅವಳ ಪರ್ಸಿನಲ್ಲಿ ಭಾವಚಿತ್ರವೊಂದನ್ನು ನೋಡಿದ.
'ಆ ಚಿತ್ರದಲ್ಲಿರುವವನು ನಿನ್ನ ಮಾಜಿ ಬಾಯ್ ಫ್ರೆಂಡೇ?' ಅವನು ಅವಳನ್ನು ಕೇಳಿದ.
ಆಗ ಅವಳು ಆ ಭಾವಚಿತ್ರವನ್ನು ಚುಂಬಿಸುತ್ತ 'ಅಲ್ಲ ಡಾರ್ಲಿಂಗ್, ಅದು ಸರ್ಜರಿಗಿಂತ ಮೊದಲಿನ ನನ್ನ ಭಾವಚಿತ್ರ' ಎಂದಳು ಅವಳು.

★★★

ಯುವಕನೊಬ್ಬ ಯುವತಿಯೊಬ್ಬಳಿಗೆ ಎಸ್.ಎಮ್.ಎಸ್. ಮಾಡಿ ಪ್ರಪೋಸ್ ಮಾಡಿದ. ಅದಕ್ಕೆ ಯುವತಿ ರಿಪ್ಲೈ ಮಾಡಿದಳು 'ಹಾಹಾಹಾ'.
ಯುವಕ ಇನ್ನೊಂದು ಮೆಸ್ಸೇಜ್ ಕಳುಹಿಸಿದ 'ನೀ ನಿಲ್ಲದೆ ನಾನೂ ಬದುಕಿರಲಾರೆ' ಯುವತಿ ರಿಪ್ಲೈ ಮಾಡಿದಳು 'ಹಾಹಾಹಾ.'
ಯುವಕ ಇನ್ನೊಂದು ಮೆಸ್ಸೇಜ್ ಕಳುಹಿಸಿದ 'ನಾನು ನಿನಗೆ ಡೈಮಂಡ್ ರಿಂಗೊಂದನ್ನು ಉಡುಗೊರೆಯಾಗಿ ಕೊಡಬೇಕೆಂದಿದ್ದೇನೆ.'
'ಹೌದಾ!' ಹುಡುಗಿ ತನ್ನ ಮೆಸ್ಸೇಜಿನಲ್ಲಿ ಕೇಳಿದಳು.
ಅದಕ್ಕೆ ಯುವಕ ರಿಪ್ಲೈ ಮಾಡಿದ– 'ಹಾಹಾಹಾ.'

★★★

ಒಂದು ಕೋಳಿ ಕಿಟಕಿಯಲ್ಲಿ ಕುಳಿತು ಮಂಚದ ಮೇಲೆ ಮಲಗಿರುವ ತನ್ನ ಯಜಮಾನನನ್ನು ನೋಡುತ್ತಿತ್ತು.
ಯಜಮಾನನಿಗೆ ಜ್ವರ ಬಂದಿತ್ತು. ಅವನ ಹೆಂಡತಿ ಅವನ ಪಕ್ಕದಲ್ಲಿ ಕುಳಿತುಕೊಂಡಿದ್ದಳು.
ಅವಳೆಂದಳು 'ನಿಮಗೆ ತುಂಬಾ ಜ್ವರ ಬಂದಿದೆ. ನಾನು ನಿಮಗಾಗಿ ಚಿಕನ್ ಸೂಪ್ ಮಾಡಿಕೊಂಡು ತರಲೇ?'
ಯಜಮಾನತಿಯ ಮಾತನ್ನು ಕೇಳಿ ಕೋಳಿಯ ಜಂಘಾಬಲವೇ ಉಡುಗಿಹೋಯಿತು ತನಗುಂಟಾದ ಭಯದಲ್ಲಿ ಕೋಳಿ ಎಂದಿತು 'ಮೇಡಂ, ಒಂದು ಕ್ರೋಸಿನ್ ಕೊಟ್ಟು ನೋಡಬಹುದಲ್ಲ?'

★★★

ಚಿಂಟು: ಡ್ಯಾಡಿ, ನಾನು ನಿನಗೊಂದು ಸಂತೋಷದ ಸುದ್ದಿ ತಿಳಿಸಬೇಕಾಗಿದೆ
ತಂದೆ: ಏನದು ಅಂತಹ ಸಂತೋಷದ ಸುದ್ದಿ?
ಚಿಂಟು: ಅಪ್ಪಾ, ಈ ವರ್ಷ ನೀನು ನನಗಾಗಿ ಹೊಸ ಪುಸ್ತಕ ಖರೀದಿಸಬೇಕಾಗಿಲ್ಲ.
ತಂದೆ: ಏಕೆ, ಈ ವರ್ಷ ಶಾಲೆಯವರೇ ಫ್ರೀಯಾಗಿ ಪುಸ್ತಕಗಳನ್ನು ನೀಡುತ್ತಿದ್ದಾರೆಯೇ?
ಚಿಂಟು: ಇಲ್ಲ ಡ್ಯಾಡಿ, ಈ ವರ್ಷ ನಾನು ಫೇಲ್ ಆಗಿದ್ದೇನೆ.

(ಸಂಗ್ರಹ) ಡಾ.ವಿ.ಪುಗಳೇಂದಿ, ಬಳ್ಳಾರಿ


ಬಿಡುವಿಲ್ಲದ ಒತ್ತಡದ ಜೀವನವು ನಿಮ್ಮ ಶಕ್ತಿಯನ್ನು ಕುಂದಿಸಿರುವುದೇ?

ವಿಟಾ-ಎಕ್ಸ್ ಗೋಲ್ಡ್ ಪ್ಲಸ್‌ನಿಂದ ಪುನಶ್ಚೇತನ ಪಡೆಯಿರಿ.

ಇದು 100% ಅಪ್ಪಟ ಚಿನ್ನದಿಂದ ತಯಾರಿಸಿರುವ ಸ್ವರ್ಣ ಭಸ್ಮದ ಸಾಮರ್ಥ್ಯ ಒಳಗೊಂಡಿದೆ. ಚೈತನ್ಯ ಮತ್ತು ಪೌರುಷವನ್ನು ಪುನಶ್ಚೇತನಗೊಳಿಸಿಕೊಳ್ಳಲು ಶಿಲಾಜೀತ್ ಶತವಾರಿ ಮತ್ತು ಅಶ್ವಗಂಧದಂತಹ ಪರಿಣಾಮಕಾರಿ ಮೂಲಿಕೆಗಳು ನೆರವಾಗುವವು ಎಂಬುದಾಗಿ ಹೆಸರು ವಾಸಿಯಾಗಿವೆ.




ಬೈದ್ಯನಾಥ್




ವಿಟಾ-ಎಕ್ಸ್ ಗೋಲ್ಡ್
ಚೈತನ್ಯ ಮತ್ತು ಪೌರುಷಕ್ಕಾಗಿ ಪ್ಲಸ್